National Rural Water Supply Scheme

83. Sri M. K. BOMME GOWDA (K. R. Pet).—

Will the Minister for Development be pleased to state :—

(*a*) the number of villages now taken up for investigation in K. R. Pet Taluk of Mandya District in connection with the National Rural Water Supply Scheme;

(*b*) the number of villages where investigation has been completed and where the Rural Water Supply Schemes have been sanctioned in K. R. Pet Taluk of Mandya District (names of the villages may be furnished);

(*c*) the number of villages for which the N.R.W.S. Schemes have been sanctioned but the work has not been executed ?

Sri B. L. GOWDA (Deputy Minister for Co-operation).—

(*a*) 7 (Seven).
(*b*) One (Agraharabachahally).
(*c*) None.

ಶ್ರೀ ಎಂ. ಕೆ. ಬೊಮ್ಮೆಗೌಡ.—ಏಳು ಗ್ರಾಮಗಳು ಎಂದು ಹೇಳಿದ್ದೀರಿ. ಅವು ಯಾವುವು ಎಂದು ಹೇಳುತ್ತೀರಾ ?

† ಶ್ರೀ ಬಿ. ಎಲ್. ಗೌಡ.—ಮಡಮಿನಕೋಡಿ, ನಂತೇಬಾಚಹಳ್ಳಿ, ಅ್ಕಹೆಬ್ಬಾಳು, ಹರಿಹರಪುರ, ಸಿದ್ದನಘಟ್ಟ, ಮಾರಪ್ಪನ ಹಳ್ಳಿ, ಕಿಕ್ಕೇರಿ.

ಶ್ರೀ ಎಂ. ಕೆ ಬೊಮ್ಮೇಗೌಡ.—ಈ ಸ್ಕೀಂ ಮಂಜೂರಾಗಿ ಹತ್ತು ವರ್ಷಗಳಾದರೂ ಇದರ ಕೆಲಸ ಮಾಡದೇ ಇರಲು ಕಾರಣವೇನು ?

ಶ್ರೀ ಬಿ. ಎಲ್. ಗೌಡ.—ಇಲ್ಲಿ ಕಂಟ್ರಾಕ್ಟರಿಗೆ ಕೆಲಸ ಒಪ್ಪಿಸಿದ್ದರೂ ಅವರು ಇಲ್ಲಿಯವರೆಗೂ ಕೆಲಸವನ್ನೇ ಪ್ರಾರಂಭ ಮಾಡಲಿಲ್ಲ. ಈಗ ಅವರನ್ನು ರೂಲ್ಸು ಪ್ರಕಾರ ವಜಾ ಮಾಡಿ ಬೇರೆಯ ವರಿಗೆ ವಹಿಸಲಾಗಿದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಈ ಕೆಲಸ ಮಂಜೂರಾಗಿ 15 ವರ್ಷಗಳಾದರೂ ಇಲ್ಲಿ ಕೆಲಸ ಮಾಡದೆ ಇದ್ದರೆ ಇದರ ಬಡ್ಡಿ ಇತ್ಯಾದಿಗಳನ್ನು ಹೊರುವವರು ಯಾರು ಮತ್ತು ಪೆನಾಲ್ಟಿ ಕೊಡುವವರು ಯಾರು ?

ಶ್ರೀ ಬಿ. ಎಲ್. ಗೌಡ.—ಪಿ. ಡಬ್ಲ್ಯು. ಡಿ. ಇಲಾಖೆಯವರು ಕೆಲಸ ಮಾಡಲು ಕಂಟ್ರಾಕ್ಟರಿಗೆ ವಹಿಸಿದರು. ಅವರು ಕೆಲಸ ಮಾಡದೇ ಇದ್ದುದರಿಂದ ಅವರ ಮೇರೆ ಎಲ್ಲಾ ಪೆನಾಲ್ಟಿಗಳೂ ಬೀಳುತ್ತವೆ.

Moodabidri Government Hospital

105. Sri RATNAKUMAR KATTEMAR (Moodabidri).—

Will the Minister for Health be pleased to state :—

(*a*) whether the foundation stone for the extension of Moodabidri Government Hospital was laid by the late Sri B. V. Baliga, the then Labour Minister of Mysore Government;